ಎಲ್ಲಾ ಭಾಷೆಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ಮಾನವನ ಮನದ ಸಹಜ ಅಭಿವ್ಯಕ್ತಿಗೆ ಪೂರಕವಾಗಿರುವ ಜನಪದ ಗಾಯನ ತನ್ನ ಇತಿಹಾಸದುದ್ದಕ್ಕೂ ಭಾರತದ ಎರಡು ಸಂಗೀತ ಪ್ರಕಾರಗಳಾದ ಹಿಂದೂಸ್ತಾನಿ ಮತ್ತು ಕರ್ನಾಟಕ ಸಂಗೀತ ಇವುಗಳನ್ನು ಶ್ರೀಮಂತಗೊಳಿಸುತ್ತಾ ಬಂದಿದೆ. ರಾಗಗಳಿಂದ ಹಿಡಿದು, ಸಾಹಿತ್ಯ, ವಿಷಯ, ವಸ್ತು, ಸಂಗೀತದ ಅಭಿವ್ಯಕ್ತಿಗೆ ನೀಡಿರುವ ಸ್ವಚ್ಛಂದತೆ, ಅದರ ದುನ್ ಎಂದು ಕರೆಯಲಾಗುವ ರಾಗದ ಮಟ್ಟುಗಳು, ಸಂಗೀತದ ಲಯಗಳು ಪ್ರತಿಯೊಬ್ಬ ಶಾಸ್ತ್ರೀಯ ಸಂಗೀತಗಾರನಿಗೆ ಪ್ರೇರಣೆಯಾಗಿವೆ. 'ನನಗೆ ಹತ್ತು ಅಥವಾ ಹದಿನೈದು ಹಿಂದೂಸ್ತಾನಿ ರಾಗಗಳನ್ನು ಹೊರತು ಪಡಿಸಿದರೆ, ಉಳಿದವುಗಳ ಪರಿಚಯವಿಲ್ಲ. ಅವುಗಳ ಅಗತ್ಯವೂ ನನಗಿಲ್ಲ. ನಾನೊಬ್ಬ ಸಾಧಾರಣ ಲೋಕ ಸಂಗೀತದ ಪ್ರತಿನಿಧಿ' ಎಂದು ಮುಕ್ತ ಮನಸ್ಸಿನಿಂದ ಹೇಳಿಕೊಳ್ಳುತ್ತಿದ್ದ ಉಸ್ತಾದ ಬಡೇ ಗುಲಾಮ ಅಲಿ ಖಾನ್ ಕೆಲವು ಸೀಮಿತ ರಾಗಗಳಿಗೆ ಲೋಕ ಸಂಗೀತದ ಶೈಲಿಯನ್ನು ಅಳವಡಿಸಿಕೊಂಡು ಭಜನ್, ಧ್ರುಪದ್, ಠುಮ್ರಿ ಮತ್ತು ಖಯಾಲ್ ಸಂಗೀತದಲ್ಲಿ ಅನಭಿಷಕ್ತ ದೊರೆ ಎನಿಸಿಕೊಂಡರು. ತಮ್ಮ ದೈತ್ಯ ಆಕಾರದಿಂದಾಗಿ ಬಡೇ ಗುಲಾಮ ಅಲಿ ಖಾನ್ ಎಂದು ಕರೆಸಿಕೊಳ್ಳುತ್ತಿದ್ದ ಅವರಿಗೆ ಕೋಮಲ ಕಂಠಸಿರಿಯಿತ್ತು. ರಾಗಗಳ ಅಗತ್ಯಕ್ಕೆ ತಕ್ಕಂತೆ ಹೊಂದಾಣಿಕೆಯಾಗುತ್ತಿದ್ದ ಅವರ ಧ್ವನಿಯ ಏರಿಳಿತವು ಸಂಗೀತ ರಸಿಕರಲ್ಲಿ ಮೋಡಿ ಮಾಡಿತ್ತು.

ಈಗ ಕೋಲ್ಕತ್ತ ಎಂದು ಕರೆಸಿಕೊಳ್ಳುತ್ತಿರುವ ಅಂದಿನ ಕಲ್ಕತ್ತ ನಗರದಲ್ಲಿ 1938ರಲ್ಲಿ ತಮ್ಮ ಮುವತ್ತಾರನೆಯ ವಯಸ್ಸಿನಲ್ಲಿ ಸಂಗೀತ ಕಛೇರಿ ನೀಡುವುದರ ಮೂಲಕ ಗುಲಾಂ ಅಲಿ ಖಾನ್ ಭಾರತದಲ್ಲಿ ಮನೆ ಮಾತಾದರು. ಆನಂತರ 1944ರಲ್ಲಿ ಮುಂಬೈ ನಗರದಲ್ಲಿ ನಡೆದ ಅಖಿಲ ಭಾರತದ ಸಂಗೀತ ಸಮ್ಮೇಳನದಲ್ಲಿ ನೀಡಿದ ಸಂಗೀತ ಕಛೇರಿಯ ಮೂಲಕ ಭಾರತದ ಸರ್ವ ಶ್ರೇಷ್ಠ ಕಲಾವಿದರ ಸಾಲಿಗೆ ಸೇರ್ಪಡೆಯಾದರು. 1947ರಲ್ಲಿ ಭಾರತ ಮತ್ತು ಪಾಕಿಸ್ತಾನ ವಿಭಜನೆಯಾದಾಗ ತನ್ನ ತಾಯ್ನಾಡಿನಲ್ಲಿ ನೆಲೆಸಲು ನಿರ್ಧರಿಸಿ ಪಾಕಿಸ್ತಾನಕ್ಕೆ ಹಿಂತಿರುಗಿದರು. ಆದರೆ 1948 – 1949ರಲ್ಲಿ ಪಾಕಿಸ್ತಾನದ ಸಂಗೀತ ಕಛೇರಿಗಳಲ್ಲಿ ಜರುಗಿದ ಎರಡು ಕಹಿ ಘಟನೆಗಳಿಂದಾಗಿ ಅವರು ಹುಟ್ಟಿ ಬೆಳೆದ ನೆಲವನ್ನು ತಿರಸ್ಕರಿಸಿ ಭಾರತಕ್ಕೆ ಬಂದು ನೆಲೆಸುವಂತಾಯಿತು. 1948ರಲ್ಲಿ ಕರಾಚಿ ನಗರದ ಆಕಾಶವಾಣಿ ಕೇಂದ್ರದಲ್ಲಿ ಧ್ರುಪದ್ ಗಾಯನವನ್ನು ಹಾಡುತ್ತಿದ್ದ ಸಂದರ್ಭದಲ್ಲಿ ಬಂದಿಶ್ ಎಂದು ಕರೆಯಲಾಗುವ ಸಂಗೀತದ ಸಾಹಿತ್ಯದಲ್ಲಿದ್ದ ಕನಯ್ಯ ಅಂದರೆ, ಕೃಷ್ಣ ಎಂಬ ಶಬ್ದವನ್ನು ಬಳಸದಂತೆ ಅಧಿಕಾರಿಗಳು ಹೇಳಿದಾಗ ಗುಲಾಮ್ ಅಲಿ ಖಾನ್ ಸಿಡಿಮಿಡಿಗೊಂಡಿದ್ದರು. ಆನಂತರ ನಡೆದ ಇನ್ನೊಂದು ಸಾರ್ವಜನಿಕ ಸಂಗೀತ ಕಾರ್ಯಕ್ರಮದಲ್ಲಿ ಸೇನೆಯ ಅಧಿಕಾರಿಗಳಿಂದ ಹಿಂದೂ ದೇವತೆಗಳ ಹೆಸರು ಬಳಸಬಾರದು ಎಂಬ ಆದೇಶ ಬಂದಾಗ 'ಸಂಗೀತ ಅರ್ಥವಾಗದವರ ನಾಡಿನಲ್ಲಿ ನಾನಿರಲಾರೆ' ಎಂದು ಘೋಷಿಸಿ, ಇಸ್ಲಾಮಾಬಾದ್ ನಗರದಲ್ಲಿದ್ದ ಭಾರತದ ರಾಯಭಾರಿ ಕಚೇರಿಯ ಮೂಲಕ ಭಾರತದ ಆಶ್ರಯ ಕೋರಿ ಮುಂಬೈಗೆ ಬಂದು ನೆಲೆಸಿದರು. ಭಾರತಕ್ಕೆ ಮರಳಿದ ನಂತರ ಅವರು ನುಡಿದ 'ಈ ಜನಗಳಿಗೆ ಸಂಗೀತ ಅರ್ಥವಾಗಿದ್ದರೆ, ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳು ವಿಭಜನೆಯ ಮೂಲಕ ಉದ್ಭವವಾಗುತ್ತಿರಲಿಲ್ಲ' ಎಂದಿದ್ದರು. ಅವರ ಈ ಮಾರ್ಮಿಕವಾದ ನುಡಿ ಎಲ್ಲಾ ಪ್ರಜ್ಞಾವಂತರ ಹೃದಯವನ್ನು ಮೀಟಿತು. 1957ರಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಮುರಾರ್ಜಿ ದೇಸಾಯಿ ಅವರು ಗುಲಾಂ ಅಲಿ ಖಾನ್ ಅವರಿಗೆ ಮುಂಬೈ ನಗರದ ಮಲಬಾರ್ ಹಿಲ್ ಎಂಬ ಪ್ರತಿಷ್ಠಿತ ಬಡಾವಣೆಯಲ್ಲಿ ನಿವೇಶನವನ್ನು